ದಿನಗಟ್ಟಲೆ ಕಷ್ಟಪಡದೇ ಎಲ್ಲವೂ ಬಹಳ ಬೇಗನೆ ಮುಗಿದುಹೋಗುತ್ತದೆ. ಅಲ್ಲಿಯವರೆಗೆ ಮಾತನಾಡುತ್ತಿರೋಣ."

"ಆಯ್ತು. ನನ್ನ ಬಳಿ ನೀನು ಏನನ್ನಾದರೂ ಕೇಳಲು ಬಯಸುತ್ತೀಯಾ, ಹೇಳು. ನಾನು ಈ ನೋವನ್ನು ಮರೆಯಬೇಕು."

ಆದರೂ ನಡುಗುವ ಧ್ವನಿಗಳು ನೋವನ್ನು ತೀವ್ರಗೊಳಿಸಿದವು. "ಬಿಡಬೇಡಿ, ಹಿಡಿಯಿರಿ... ಅವನೇ... ಅಯ್ಯೋ ಪಾಪಿ... ನಮ್ಮ ಬಾಪುವನ್ನು ಕೊಂದುಬಿಟ್ಟೆಯಲ್ಲೋ... ಬಾಪು... ಬಾಪೂ... ಅಯ್ಯೋ... ಅಹಿಂಸೆಯನ್ನು ಬೋಧಿಸಿದವನಿಗೆ ಹೀಗೊಂದು ಸಾವೇ?''

"ಮೋಹನ್...ಮೋಹನ್... ಯಾಕೆ ಉತ್ತರವೇ ಇಲ್ಲ? ನಾನು ಮಾತನಾಡುವುದು ಕೇಳಿಸುತ್ತಿದೆಯೇ?"

"ಕ್ಷಮಿಸು ಕಸ್ತೂರ್. ನೆನಪುಗಳು ಛಿದ್ರವಾಗಿವೆ. ಸರಿ... ಮತ್ತೆ ಕೇಳು."

"ಮೋಹನ್, ಇಂತಹ ಬಲಿಷ್ಠವಾದ ಸರಕಾರವನ್ನು ಎದುರಿಸಿ ನಿಲ್ಲಬೇಕೆಂದು ಯಾಕೆ ನಿರ್ಧಾರ ಮಾಡಿದಿರಿ? ಏನನ್ನು ಬೇಕಾದರೂ ಮಾಡುವ ಸಾಮರ್ಥ್ಯ ಅಧಿಕಾರಕ್ಕೆ ಇರುವಾಗ ನಿಮ್ಮ ನಿರ್ಧಾರ ತಪ್ಪೆಂದು ಎಂದಾದರೂ ಅನಿಸಿದೆಯೇ?"

"ಓ, ಇದನ್ನೇ ಅಲ್ಲವೇ ನೀನು ಆಘಾಖಾನ್ ಸೆರೆಮನೆಯಲ್ಲೂ ಕೇಳಿದೆ."

"ಅಂದು ರೈಲು ನಿಲ್ದಾಣದಲ್ಲಿ ಜನಗಳ ನಡತೆಯನ್ನು ನೋಡಿದಾಗ ನಿಮ್ಮ ಕಾರ್ಯಾಚರಣೆಗಳು ತಪ್ಪು ಎಂದು ನನಗೆ ಅನಿಸಿತು. ಅದೇ ಸಮಯ ಹೋರಾಟದ ಪರಿಣಾಮಗಳನ್ನು ಜನ ಎಷ್ಟು ದಿನ ತಡೆದುಕೊಳ್ಳುತ್ತಾರೆ ಎಂಬ ಆತಂಕ ಬೇರೆ ಇತ್ತು."

"ಅದಕ್ಕೆ ನಾನು ಕಾರಣ ಹೇಳಲು ಬಂದಾಗ ನೀನು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳಲು ತಯಾರಿರಲಿಲ್ಲ. ಅದಕ್ಕೇ ನನಗೆ ಕೋಪ ಬಂದಿತು. ಈಗ ಏನು ಮಾಡಬೇಕೆಂದು ಅಪೇಕ್ಷಿಸುತ್ತಿರುವೆ? ನೀನು, ನಾನು ಸರಕಾರಕ್ಕೆ ಕ್ಷಮಾಪಣೆ ಪತ್ರ ಬರೆದು ಕೊಡೋಣವೇ ಎಂದು ಕೇಳಿದೆ. 'ನಾನೇಕೆ ಅವರ ಬಳಿ ಕ್ಷಮೆ ಯಾಚಿಸಬೇಕು?' ಎಂದು ಕಿರುಚಾಡಿದೆ... 'ನೀವು ಯಾಕೆ ಕ್ಷಮೆ ಕೇಳಬೇಕು' ಎಂದು ಕೋಪಿಸಿಕೊಂಡೆ... ನೀವು ಮಾಡಿದ್ದೆಲ್ಲವನ್ನೂ ನೆನಪು ಮಾಡಿಕೊಳ್ಳಿ. ನಿಮ್ಮಿಂದ ಹೆಣ್ಣುಮಕ್ಕಳೆಲ್ಲಾ ಜೈಲಿನಲ್ಲಿದ್ದಾರೆ. ಮಹಾದೇವ್ ಹೊರಟೇ ಹೋದರು. ಮುಂದೆ ನೀವೇ ಎಂದು ಕೂಗಿದೆ. ಮರಣವೆಂಬುದು ನೋವೇ, ಆದರೆ ಬಿಡುಗಡೆ ಅಲ್ಲವೇ?"

"ಸಾಕು... ಸಾಕು ನೀವು ಬಿಡುಗಡೆ... ಸ್ವಾತಂತ್ರ್ಯ ಅಂತ ಕೂಗಾಡಿದ್ದೆಲ್ಲಾ ಸಾಕು. ನೀವೇಕೆ ಅವರನ್ನು ದೇಶ ಬಿಡಬೇಕೆಂದು ಹೇಳಿದಿರಿ. ನಮ್ಮ ದೇಶ ದೊಡ್ಡದು, ಅವರು ಇಷ್ಟಪಟ್ಟರೆ ಇಲ್ಲೇ ಉಳಿದುಕೊಳ್ಳಬಹುದು ಅಂತ ಹೇಳಬಹುದಿತ್ತಲ್ಲಾ."

"ಕಸ್ತೂರ್... ನಾನು ಅದನ್ನೇ ಹೇಳಿದ್ದೆ. ಆಡಳಿತದ ಜವಾಬ್ದಾರಿಯಿಂದ ಅವರು ಕೆಳಗಿಳಿದರೆ, ನಮಗೂ ಅವರಿಗೂ ಯಾವ ಸಮಸ್ಯೆ ಇರಲು ಸಾಧ್ಯ. ಬಯಸಿದರೆ ಅವರು ಸೋದರರಂತೆ ಇಲ್ಲೇ ಇರಬಹುದು ಅಂತ ನಾನು ಹೇಳಲಿಲ್ಲವೇ?"

ಅನಂತರ ತೇಲಿದ ಅರ್ಥಗರ್ಭಿತ ಮೌನದ ಬಳಿಕ, "ಸೋದರರು ಎಂಬ ಪದ ಅರ್ಥ ಕಳೆದುಕೊಂಡು... ನಿರರ್ಥಕವಾಗಿ..."

"ಮೋಹನ್... ಮೋಹನ್... ನಿಮಗೆ ಏನಾಯ್ತು? ಏನನ್ನೋ ಗೊಣಗುತ್ತಿದ್ದೀರಿ, ನನಗೆ ಏನೂ ಕೇಳಿಸುತ್ತಿಲ್ಲ."

"ಕಸ್ತೂರ್, ಸೋದರರು ಎಂಬ ಪದಕ್ಕೆ ಅರ್ಥ ಏನೂ ಅಂತ ತಿಳಿಯುತ್ತಿಲ್ಲ" ಧ್ವನಿ ಸ್ವಲ್ಪ ಗದ್ಗದವಾಗಿತ್ತು.